**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

Form No.4(Civil)
(R.P.No.57)

**S.C No.: 25/2017**

ಪಿ.ಡಬ್ಲ್ಯೂ ನಂಃ 3
ಸಿ.ಡಬ್ಲ್ಯೂ ನಂಃ 7
ಸಾಕ್ಷಿಯನ್ನು ದಿನಾಂಕಃ 20-07-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಂಗಪ್ಪ |
| ತಂದೆಯ ಹೆಸರು | ಃ | ಪರಸಪ್ಪ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈ ಪ್ರಕರಣಕ್ಕೆ ಸಂಬಂಧಿಸಿದ ಮೃತ ಮಂಜುಳಾ ನನ್ನ ಹೆಂಡತಿ ಇರುತ್ತಾಳೆ. ನಮ್ಮ ಮದುವೆ 2007 ರಲ್ಲಿ ಆಗಿತ್ತು. ಆಕೆ ನಮ್ಮ ಅಕ್ಕನ ಮಗಳು ಇರುತ್ತಾಳೆ. ನಮಗೆ ಇಬ್ಬರು ಹೆಣ್ಣುಮಕ್ಕಳಿದ್ದು -ಕಮಲಾಕ್ಷಿ ಮತ್ತು ಹರ್ಷಿತಾ ಅಂತಾ ಇರುತ್ತಾರೆ. ನನ್ನ ಹೆಂಡತಿ ಆಶಾ ಕಾರ್ಯಕರ್ತೆ ಅಂತಾ 2009 ರಿಂದ 2016 ರವರೆಗೆ ಅಂದರೆ ಅವಳು ಮರಣ ಹೊಂದುವವರೆಗೆ ಕೆಲಸ ಮಾಡುತ್ತಿದ್ದಳು. ಅವಳಿಗೆ ವಹಿಸಿಕೊಡಲಾದ ಬಡಾವಣೆಗಳ ಗರ್ಭಿಣಿ ಹೆಣ್ಣುಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಮತ್ತು ಅವರ ಹೆರಿಗೊಸ್ಕರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ನಂತರದ ಅವರಿಗೆ ವೈದ್ಯಕೀಯ ಚಿಕಿತ್ಸೆ ಬೇಕಾದಲ್ಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುವುದು ಮಾಡುತ್ತಿದ್ದಳು.

ಉಭಯ ಆರೋಪಿತರ ಪರಿಚಯವಿದೆ. ದಿಃ 13-6-2016 ರಂದು ಬೆಳಿಗ್ಗೆ 8 ಗಂಟೆಗೆ ಕುಷ್ಟಗಿಯಲ್ಲಿ ಮಿಟಿಂಗ ಇದೆ ಅಂತಾ ಮನೆಯಿಂದ ಹೋದಳು. ಸಾಯಂಕಾಲ 5-30 ರವರೆಗೆ ಕಾಯ್ದು ನೋಡಿದೆವು. ಅವಳ ಜೊತೆಗೆ ಕೆಲಸ ಮಾಡುತ್ತಿದ್ದ ರೇಣುಕಾ ಮ್ಯಾಗೇರಿ ಎನ್ನುವ ಆಶಾಕಾರ್ಯಕರ್ತೆಗೆ ಆಕೆಯ ವಿಷಯವಾಗಿ ಫೋನು ಮೂಲಕ ವಿಚಾರಿಸಲಾಗಿ ನನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬರಲು ಊರಿಗೆ ಹೋಗುತ್ತೇನೆ ಅಂತಾ ಹೋಗಿರುತ್ತಾಳೆ ಅಂತಾ ಹೇಳಿದಳು. ಆ ಮೇಲೆ ಕೂಡಾ ಬರಲಿಲ್ಲ, ಅದಕ್ಕಾಗಿ ಬಸ್ಟ್ಯಾಂಡ ಹತ್ತಿರ 7 ರಿಂದ 8-30 ರವರೆಗೆ ಕಾಯ್ದರೂ ಕೂಡಾ

ಅವಳು ಬರಲಿಲ್ಲ, ನಂತರ ವಾಪಸ್ ನಾನು ಮನೆಗೆ ಹೋದೆನು.

ಬೆಳಿಗ್ಗೆ 10-30 ಗಂಟೆಗೆ ನಮ್ಮ ಅಣ್ಣ ಕನಕಪ್ಪ ಹಳ್ಳದಮಾಳಿ ಫೋನು ಮಾಡಿ ಕುರುಬನಾಳ ಸೀಮಾದಲ್ಲಿ ಒಬ್ಬಳು ಆಶಾಕಾರ್ಯಕರ್ತೆ ಹಾಕಿಕೊಂಡ ಸೀರೆ ತರಹ ಕಂಡುಬರುವ ಒಬ್ಬ ಹೆಣ್ಣುಮಗಳನ್ನು ಸುಟ್ಟ ಶವ ಬಿದ್ದಿದೆ ಅಂತಾ ನಮಗೆ ತಿಳಿಸಿದ. ಸಂಗಪ್ಪ ಭಾವಿಕಟ್ಟಿ, ಕನಕಪ್ಪ, ಶಂಕ್ರಪ್ಪ ಚೌಡ್ಕಿ, ಮತ್ತು ನಾನು ಎಲ್ಲರೂ ಕೂಡಿ ಅಲ್ಲಿಗೆ ಹೋದೆವು. ಸದರಿ ಶವದ ಮೇಲೆ ಇರುವ ಎಲ್ಲಾ ಸೀರೆ ಸುಟ್ಟು ಸ್ವಲ್ಪ ಮಾತ್ರ ಉಳಿದಿತ್ತು, ಪೆಟ್ರೂಲ ಹಾಕಿ ಸುಟ್ಟಿರುವುದು ಗೊತ್ತಾಯಿತು. ಅಲ್ಲಿಯೇ ಒಂದು ಸ್ವಲ್ಪ ಸುಟ್ಟ ಚಾಪೆ ಕೂಡಾ ಇತ್ತು. ಅಲ್ಲಿ ನನ್ನ ಹೆಂಡತಿಯ ಪಾಸಪೋರ್ಟ ಫೋಟೋ ಮತ್ತು ಸದರಿ ಆಶಾಕಾರ್ಯಕರ್ತರನ್ನು ಕರೆದುಕೊಂಡು ಹೋಗುವ ಮತ್ತು ಕರೆದುಕೊಂಡು ಬರುವ ಶಿವಪ್ಪ ಕೋಡಿಹಾಳ ಎನ್ನುವವನ ಫೋಟೋ ಸಹಾ ಕೃತ್ಯ ನಡೆದ ಸ್ಥಳದಿಂದ 6 ಅಡಿ ದೂರದಲ್ಲಿ ಬಿದ್ದಿದ್ದವು.

ಪೊಲೀಸರು ಸದರಿ ಶವ ಪರಿಶೀಲಿಸಿ ಪಂಚನಾಮೆ ಕೈಗೊಳ್ಳುವವರೆಗೆ ನಾನು ಅಲ್ಲಿಯೇ ಇದ್ದೆನು. ಈಗ ತೋರಿಸಿದ ಫೋಟೋ ಕೂಡಾ ಪೊಲೀಸರು ನನ್ನ ಸಮಕ್ಷಮದಲ್ಲಿ ಕೃತ್ಯ ನಡೆದ ಸ್ಥಳದ ಕುರಿತು ತೆಗೆದಿದ್ದು ಇರುತ್ತದೆ. ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ನಂತರ ದಿಃ 19-4-2016 ರಂದು ಮತ್ತೊಮ್ಮೆ ಪೊಲೀಸರು ನನ್ನನ್ನು ಪೊಲೀಸ ಠಾಣೆಗೆ ಕರೆಸಿ ಚಪ್ಪಲ ಮತ್ತು ಫೋನು ಗುರುತಿಸಲು ಹೇಳಿದ್ದರು. ಅವು ನಾನು ನನ್ನ ಹೆಂಡತಿಯವು ಅಂತಾ ಗುರುತಿಸಿದೆನು. ಸದರಿಯವುಗಳನ್ನು ಈಗ ನಾನು ಮತ್ತೊಮ್ಮೆ ನೋಡಿದೆನು ಗುರುತಿಸಿದೆನು ಅವುಗಳನ್ನು ಕ್ರಮವಾಗಿ ಎಂಓ 1 ಮತ್ತು 2 ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಬಿದ್ದಿದ್ದ ಈಗ ತೋರಿಸಿದ ಒಂದು ಚಾಪೆಯನ್ನು ಪೊಲೀಸರು ನನ್ನ ಸಮಕ್ಷಮವೇ ಅಮಾನತ್ತುಪಡಿಸಿಕೊಂಡಿದ್ದಾರೆ. ಅದನ್ನು ಈಗ ನಾನು ನೋಡಿದೆನು ಗುರುತಿಸಿದೆನು ಅದನ್ನು ಎಂಓ 3 ಎಂದು ಗುರುತಿಸಲಾಯಿತು. ಪೊಲೀಸರು ಘಟನಾ ಸ್ಥಳದಿಂದ ಅಮಾನತ್ತುಪಡಿಸಿಕೊಂಡ ನನ್ನ ಹೆಂಡತಿಯ ಅರ್ಧಂಬರ್ಧ ಸುಟ್ಟ ಸೀರೆ ತುಕಡಿ ಮತ್ತು ಶಿವಪ್ಪ ಕೋಡಿಹಾಳ ಅವರ ಫೋಟೋಗಳನ್ನು ಈಗ ನಾನು ನೋಡಿದೆನು ಗುರುತಿಸಿದೆನು ಸುಟ್ಟ ಸೀರೆಯನ್ನು ಎಂಓ 4 ಎಂದು ಗುರುತಿಸಲಾಯಿತು, ನನ್ನ ಹೆಂಡತಿಯ 4 ಫೋಟೋಗಳನ್ನು ಎಂಓ 5 ಎಂದು ಗುರುತಿಸಲಾಯಿತು, ಶಿವಪ್ಪ ಕೋಡಿಹಾಳನ ಒಂದು ಫೋಟೋವನ್ನು ಅದನ್ನು ನಾನು ನೋಡಿದೆನು ಗುರುತಿಸಿದೆನು ಅದನ್ನು ಎಂಓ 6 ಅಂತಾ ಗುರುತಿಸಲಾಯಿತು.

1ನೇ ಆರೋಪಿ ಆಶಾಕಾರ್ಯಕರ್ತೆ ಹುದ್ದೆಗಾಗಿ ಅರ್ಜಿ ಸಲ್ಲಿಸಿದ್ದಳು. ಆದರೆ ಅವಳನ್ನು ಆಶಾಕಾರ್ಯಕರ್ತೆಯಾಗಿ ನೇಮಿಸಿಕೊಳ್ಳಲಿಲ್ಲ. ನನ್ನ ಹೆಂಡತಿಯೇ ಅವಳು ಆಶಾಕಾರ್ಯಕರ್ತೆಯಾಗಿ ನೇಮಕವಾಗುವುದನ್ನು ತಡೆದಿದ್ದಾಳೆ ಅಂತಾ ಆಕೆಯ ಮೇಲೆ ದ್ವೇಷ ಹೊಂದಿದ್ದಳು. 1ನೇ ಆರೋಪಿ ಕುಷ್ಟಗಿಯಲ್ಲಿರುವ ತನ್ನ ರೂಮಿಗೆ ನನ್ನ ಹೆಂಡತಿಯನ್ನು ಫೋನು ಮೂಲಕ ಕರೆಯಿಸಿಕೊಂಡು ಅವಳಿಗೆ ನಿದ್ರೆ ಮಾತ್ರೆಯನ್ನು ಕೊಟ್ಟಳು. ಅವಳು ಪ್ರಜ್ಞಾಹೀನಳಾದ ನಂತರ ಆಕೆಯ ಕುತ್ತಿಗೆಗೆ ಟವೆಲ್ಲನಿಂದ ಬಿಗಿದು ಕೃತ್ಯ ನಡೆದ ಸ್ಥಳ ಕುರುಬನಾಳ ಸೀಮಾಕ್ಕೆ ಕರೆದುಕೊಂಡು ಹೋಗಿ 1ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವ 2ನೇ ಆರೋಪಿಯ ಸಹಾಯ ತೆಗೆದುಕೊಂಡು ಅಲ್ಲಿ ನನ್ನ ಹೆಂಡತಿಗೆ ಪೆಟ್ರೋಲ ಹಾಕಿ ಸುಟ್ಟು ಹಾಕಿ ಅವಳ ಗುರುತು ಸಿಗದಂತೆ ಮಾಡಿರುತ್ತಾರೆ ಅಂತಾ ಪೊಲೀಸರ ತನಿಖೆಯಲ್ಲಿ ಗೊತ್ತಾಗಿರುತ್ತದೆ. ಸದರಿ ಎಲ್ಲಾ ವಿಷಯವನ್ನು ನಾನು ಹೇಳಿಕೆ ಮತ್ತು ಪುರವಣಿ ಹೇಳಿಕೆ ರೂಪದಲ್ಲಿ ಪೊಲೀಸರಿಗೆ ನೀಡಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು : 1ನೇ ಆರೋಪಿ ಪರ ವಕೀಲರಿಂದ</u>

1ನೇ ಆರೋಪಿ ಗುಂಡಮ್ಮ ನಮ್ಮೂರಿನವಳೇ ಇರುತ್ತಾಳೆ ಎನ್ನುವುದು ನಿಜ. ಚಾಸಾ 1 ಕನಕಪ್ಪ, ಚಾಸಾ 2 ಗ್ಯಾನಪ್ಪ, ಚಾಸಾ 8 ಸಂಗಪ್ಪ ಭಾವಿಕಟ್ಟಿ, ಚಾಸಾ 9 ಶಂಕ್ರಪ್ಪ, ಚಾಸಾ 11 ಪರಸಪ್ಪ, ಚಾಸಾ 13 ಶಿವಪ್ಪ, ಚಾಸಾ 14 ಕರಿಯವ್ವ, ಚಾಸಾ 15 ಶಿವಲೀಲಾ, ಚಾಸಾ 19 ಶರಣಗೌಡ ನಾವೆಲ್ಲರೂ ಒಂದೇ ಜಾತಿಯವರಿದ್ದು ಪರಸ್ಪರ ಸಂಬಂಧಿಕರು ಎಂದರೆ ನಿಜ. ನನ್ನ ಹೆಂಡತಿ ಮೃತ ಮಂಜುಳಾ ಆಶಾಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಾಗ ಅವಳು ಬೇರೆಯವರೊಂದಿಗೆ ಫೋನು ಮೂಲಕ ಮನೆಯಲ್ಲಿ ಮಾತನಾಡುತ್ತಿದ್ದಾಗ ಆಕೆ ಮತ್ತು ನನ್ನ ಮಧ್ಯ ಆಗಾಗ ಮನಸ್ತಾಪ ಮತ್ತು ಜಗಳಗಳು ಆಗುತ್ತಿದ್ದವು ಎಂದರೆ ಸಾಕ್ಷಿದಾರನು ಕೇವಲ ಒಂದು ಬಾರಿ ಮಾತ್ರ ಹಾಗೇ ಆಗಿರುತ್ತದೆ ಅಂತಾ ಹೇಳುತ್ತಾನೆ. ನಮ್ಮಿಬ್ಬರ ಮಧ್ಯ ಜಗಳವಾದಾಗಲೆಲ್ಲಾ ನನ್ನ ಹೆಂಡತಿ ಮಂಜುಳಾ ನನಗೆ ಸಾಕಾಗಿ ಹೋಗಿದೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಅಂತಾ ಹಲವಾರು ಬಾರಿ ನನ್ನೆದುರು ಹೇಳಿದ್ದಾಳೆ ಎಂದರೆ ಸರಿಯಲ್ಲ.

ಈ ಹಿಂದೆ ಒಂದುವರೆ ವರ್ಷದ ಹಿಂದೆ ನನ್ನ ಹೆಂಡತಿ ಮಂಜುಳಾ ಫೋನು ಮೂಲಕ ಬೇರೆಯವರೊಂದಿಗೆ ಮಾತನಾಡುತ್ತಿದ್ದಾಗ ಸದರಿ ವಿಷಯದ ಬಗ್ಗೆ ಜಗಳ ಆಗಿ ಅವಳು ಆತ್ಮಹತ್ಯೆಗೆ ಪ್ರಯತ್ನಿಸಿದ್ದಳು ಅಂತಾ ಹೇಳಿಕೆಯ ಖಂಡಿಕೆ -2 ರಲ್ಲಿ ಕಂಡುಬರುವುದನ್ನು ನಾನು ಪೊಲೀಸರಿಗೆ ಹೇಳಿಲ್ಲ. ಸಾಕ್ಷಿದಾರನು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಒಕ್ಕಲುತನ ಮಾಡುತ್ತೇನೆ. ನನ್ನ ಫೋನಿನಲ್ಲಿ ನನ್ನ ಹೆಂಡತಿಯ ಫೋನ ನಂಬರ ಇತ್ತು. ಆದರೆ ಆ ದಿನ ನಾನು ಅವಳಿಗೆ ನನ್ನ ಫೋನ ಮೂಲಕ ಫೋನು ಮಾಡಲಿಲ್ಲ. ನನ್ನ ಹೆಂಡತಿ ಮನೆಗೆ ಬರದೇ ಇದ್ದುದನ್ನು ಕಂಡು ಅವಳ ಸಲುವಾಗಿ ರಾತ್ರಿ 8-30 ವರೆಗೆ ನಮ್ಮೂರಿನ ಬಸ್ಸ್ಯಾಂಡ ಹತ್ತಿರ ಕಾಯ್ದಿರುತ್ತೇನೆ. ನನ್ನ ಇಬ್ಬರು ಹೆಣ್ಣುಮಕ್ಕಳು ಶಾಲೆಯ ಬಸ್ಸಿನ ಮೂಲಕ ಮನೆಗೆ ದಿನನಿತ್ಯದಂತೆ ಸಾಯಂಕಾಲ 5 ಗಂಟೆಗೆ ಬಂದಿದ್ದರು, ನನ್ನ ಹೆಂಡತಿ ಒಂದೊಂದು ಬಾರಿ ಡ್ಯೂಟಿಗೆ ಹೋದಾಗ ಆಸ್ಪತ್ರೆಯಲ್ಲಿಯೇ ಇರುತ್ತಿದ್ದಳು. ಅದಕ್ಕಾಗಿ ನಾನು ಆಕೆಯ ಸಲುವಾಗಿ ಬೇರೆ ಕಡೆಗೆ ಹುಡುಕುವ ಪ್ರಯತ್ನವನ್ನಾಗಲೀ ಮತ್ತು ಪೊಲೀಸರಿಗೆ ಮಿಸ್ಸಿಂಗ ದೂರನ್ನು ಕೊಡುವ ಪ್ರಯತ್ನ ಮಾಡಲಿಲ್ಲ, ನನ್ನಹೆಂಡತಿ ಹೆರಿಗೆಯ ಸಂದರ್ಭದಲ್ಲಿ ಫೋನು ತೆಗೆಯುತ್ತಿರಲಿಲ್ಲ ಅದಕ್ಕಾಗಿ ನಾನು ಅವಳಿಗೆ ಫೋನು ಮಾಡಲಿಲ್ಲ. ಇಡೀ ರಾತ್ರಿ ಮತ್ತು ಬೆಳಗ್ಗೆಯವರೆಗೆ ನಾನು ಆಕೆಗೆ ಫೋನು ಮಾಡಿಲ್ಲ.

ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಹೆಂಡತಿಯ ಶವ ದಕ್ಷಿಣಕ್ಕೆ ತಲೆ ಮತ್ತು ಉತ್ತರಕ್ಕೆ ಕಾಲು ಮಾಡಿಕೊಂಡು ಬಿದ್ದಿದ್ದು ಕಂಡುಬಂದಿತ್ತು. ಆಕೆಯ ದೇಹದ ಸಂಪೂರ್ಣ ಭಾಗ ಸುಟ್ಟಿತ್ತು, ಮುಖವು ಕೂಡಾ ಸುಟ್ಟು ಕರಕಲಾಗಿತ್ತು. ಸ್ವಲ್ಪ ಸೀರೆ ಮಾತ್ರ ಸುಟ್ಟಿರಲಿಲ್ಲ. ನನ್ನ ಹೆಂಡತಿಯ ಮತ್ತು ಶಿವಪ್ಪ ಕೋಡಿಹಾಳ ಅವರ ಪಾಸಪೋರ್ಟ ಗಾತ್ರ ಫೊಟೋಗಳು ನನ್ನ ಹೆಂಡತಿಯ ಶವದಿಂದ 6 ಅಡಿ ಅಂತರದಲ್ಲಿ ಬಿದ್ದಿದ್ದವು. ಸದರಿ ಶವದ ಸುತ್ತಮುತ್ತಲೂ ನನ್ನ ಹೆಂಡತಿಗೆ ಸಂಬಂಧಿಸಿದ ಯಾವುದೇ ಸಾಮಾನುಗಳು ಬಿದ್ದಿರಲಿಲ್ಲ.

ಶವ ಬಿದ್ದ ಪೂರ್ವ ದಿಕ್ಕಿಗೆ ಯಾರ ಜಮೀನು ಬರುತ್ತದೆ ಎಂದು ಹೇಳಲಾಗುವುದಿಲ್ಲ, ಪಶ್ಚಿಮ ದಿಕ್ಕಿಗೆ ಯಾರ ಜಮೀನು ಬರುತ್ತದೆ ಅಂತಾ ಹೇಳಲಾಗುವುದಿಲ್ಲ ಆದರೆ ಕೃತ್ಯ ನಡೆದ ಸ್ಥಳ ಗುಡ್ಡದ ಮಧ್ಯ ಬರುತ್ತದೆ. ಕೃತ್ಯ ನಡೆದ ಸ್ಥಳ ಬೇರೆ ಊರಿನ ಸ್ಥಳವಾಗಿರುವುದರಿಂದ ಪೂರ್ವ ಪಶ್ಚಿಮ ಮತ್ತು ಉತ್ತರ ದಕ್ಷಿಣದ ದಿಕ್ಕುಗಳಲ್ಲಿ ಏನೇನು ಇರುತ್ತವೆ ಅಂತಾ ನನಗೆ ಹೇಳಲಾಗುವುದಿಲ್ಲ.

ಶವತನಿಖೆ ಪಂಚನಾಮೆ ಕಾಲಕ್ಕೆ - ಕನಕಪ್ಪ ಹಳ್ಳದಮಾಳಿ, ಸಂಗಪ್ಪ ಭಾವಿಕಟ್ಟಿ, ಕನಕಪ್ಪ ರಾಣಿ, ಶಂಕ್ರಪ್ಪ ಚೌಡ್ಕಿ ಎನ್ನುವವರು ಇದ್ದರು. ಅವರ ಹೊರತು ಅಲ್ಲಿ ಬೇರೆ ಯಾರೂ ಇರಲಿಲ್ಲ. ಎಂಒ 1 ಯಾವ ಕಂಪನಿಯದು ಇರುತ್ತದೆ ಅಂತಾ ಹೇಳಲಾಗುವುದಿಲ್ಲ.

ಶವ ಪಂಚನಾಮೆಯಾದ ನಂತರ ರಾತ್ರಿ ನಮ್ಮೂರಿಗೆ ಪೊಲೀಸರು ಬಂದಿದ್ದರು. ಅಲ್ಲಿ ಅವರು ನಮ್ಮ ಮನೆಯ ಒಳ ಮತ್ತು ಹೊರಭಾಗದ ವಿಡಿಯೋವನ್ನು ಮಾಡಿಕೊಂಡು ಹೋಗಿದ್ದಾರೆ. ಸದರಿ ವಿಡಿಯೋವನ್ನು ನಮಗೆ ಪೊಲೀಸರು ಯಾವತ್ತೂ ತೋರಿಸಿಲ್ಲ. ಶವ ಪಂಚನಾಮೆಯನ್ನು ಯಾವ ಸಮಯದಿಂದ ಯಾವ ಸಮಯದವರೆಗೆ ಕೈಗೊಳ್ಳಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ಶವ ಪಂಚನಾಮೆಯಲ್ಲಿ ಪೊಲೀಸರು ಏನೇನು ಬರೆದಿದ್ದಾರೆ ಅಂತಾ ನನಗೆ ಹೇಳಲಾಗುವುದಿಲ್ಲ, ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸ ಠಾಣೆಗೆ ದಿಃ 19-4-2016 ರಂದು ಮತ್ತು ಇನ್ನೊಂದು ಬಾರಿ ಹೀಗೆ 2 ಬಾರಿ ಹೋಗಿದ್ದೇನೆ. ಆ ಸಂದರ್ಭದಲ್ಲಿ ಶಿವಪ್ಪ ಕೋಡಿಹಾಳ ಪೊಲೀಸ ಸ್ಟೇಶನದಲ್ಲಿ ಇದ್ದನು. ದಿಃ 19-4-2016 ರಂದು ಶಿವಪ್ಪ ಕೋಡಿಹಾಳನಿಗೆ ಪೊಲೀಸ ಠಾಣೆಯಿಂದ ಬಿಡಿಸಿ ಕರೆತರಲು ಹೋಗಿದ್ದೆನು ಎಂದರೆ ಸರಿಯಲ್ಲ, ಸಿಪಿಐ ಅವರು ಪ್ರಕರಣಕ್ಕೆ ಸಂಬಂಧಿಸಿದಂತೆ ಚಪ್ಪಲ, ಮೋಬೈಲ ಪತ್ತೆ ಹಚ್ಚಿದ್ದೇವೆ ಗುರುತಿಸಲು ಬಾ ಅಂತಾ ಹೇಳಿದ್ದರಿಂದ ನಾನು ಸಿಪಿಐ ರವರ ಕಚೇರಿಗೆ ಹೋಗಿದ್ದೆನು. ಈ ವಿಷಯವಾಗಿ ಪೊಲೀಸರು ನನ್ನನ್ನು ವಿಚಾರ ಮಾಡಿ ಹೇಳಿಕೆ ಮತ್ತು ಪುರವಣಿ ಹೇಳಿಕೆಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತು ಹೇಳಿಕೆ ಮತ್ತು ಪುರವಣಿ ಹೇಳಿಕೆಗಳನ್ನು ನೀಡಿದ್ದೇನೆ ಅಂತಾ ವಾರ ಮತ್ತು ದಿನಾಂಕವನ್ನು ಹೇಳಲಾಗುವುದಿಲ್ಲ. ನನ್ನ ಹೇಳಿಕೆ ಮತ್ತು ಪುರವಣಿ ಹೇಳಿಕೆಗಳನ್ನು ನಾನು ಸ್ವತಃ ಓದಿ ನೋಡಿಲ್ಲ ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಅಲ್ಲಿ ನನ್ನ ಹೆಂಡತಿಯ ಶವ ಸುಟ್ಟು ಬಿದ್ದಿದ್ದನ್ನು ನೋಡಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಂಡತಿಯ ಕುರಿತು 1 ಮತ್ತು 2ನೇ ಆರೋಪಿತರ ವಿರುದ್ಧ ಸುಳ್ಳು ಆಪಾದನೆ ಮಾಡಿದ್ದೇನೆ ಎಂದರೆ ಸರಿಯಲ್ಲ, ನನ್ನ ಹೆಂಡತಿ ಮರಣ ಹೊಂದಿದ್ದಕ್ಕೂ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ನನ್ನ ಮತ್ತು ನನ್ನ ಹೆಂಡತಿ ಮಂಜುಳಾ ಮಧ್ಯ ಸಾಕಷ್ಟು ಬಾರಿ ಜಗಳಗಳಾಗಿ ಮನಸ್ತಾಪ ಉಂಟಾಗಿ ಅವಳು ಸ್ವತಃ ಘಟನಾ ಸ್ಥಳಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ, ಸದರಿ

ವಿಷಯವನ್ನು ಬಚ್ಚಿಡುವ ಸಲುವಾಗಿ ಆರೋಪಿತರ ಮೇಲೆ ಸುಳ್ಳು ಆಪಾದನೆ ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಗುಂಡಮ್ಮ 3 ರಿಂದ 4 ನೇ ತರಗತಿಯಲ್ಲಿ ಓದಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ 10 ನೇ ತರಗತಿಯವರೆಗೆ ಓದಿದ್ದರಿಂದ ಅವಳು ಆಶಾಕಾರ್ಯಕರ್ತೆಯಾಗಿದ್ದಳು. ಸದರಿ ಹುದ್ದೆಗೆ 10 ನೇ ತರಗತಿಯವರೆಗೆ ಓದಿರಬೇಕಾಗುತ್ತದೆ ಎಂದರೆ ನನಗೆ ನಿಜ. 1 ನೇ ಆರೋಪಿ ಗುಂಡಮ್ಮ ಯಾವತ್ತೂ ಆಶಾಕಾರ್ಯಕರ್ತೆ ಹುದ್ದೆಯನ್ನು ಕೇಳಿಕೊಂಡು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ಗುಂಡಮ್ಮ ಮತ್ತು 2 ನೇ ಆರೋಪಿಯ ಮಧ್ಯ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಸದರಿ ವಿಷಯದ ಕುರಿತು ಕೂಡಾ ನಾನು ಸುಳ್ಳು ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ, ಈ ಪ್ರಕರಣದಲ್ಲಿ ನಾನು ಸುಳ್ಳು ಹೇಳಿಕೆ ಮತ್ತು ಪುರವಣಿ ಹೇಳಿಕೆಗಳನ್ನುಕೊಟ್ಟು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 2 ನೇ ಆರೋಪಿ ಪರ ವಕೀಲರಿಂದ</u>

2 ನೇ ಆರೋಪಿ ನಮ್ಮ ಊರಿನವನಲ್ಲ ಮತ್ತು ಜಾತಿಯವನಲ್ಲ ಎಂದರೆ ನಿಜ. 1 ಮತ್ತು 2 ನೇ ಆರೋಪಿತರ ಮಧ್ಯ ಯಾವುದೇ ಅನೈತಿಕ ಸಂಬಂಧ ಇಲ್ಲ ಎನ್ನುವುದು ನನಗೆ ಚೆನ್ನಾಗಿ ಗೊತ್ತಿದ್ದರೂ ಕೂಡಾ ಅವರ ವಿರುದ್ದ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಬನ್ನಿಕಟ್ಟಿ ಹನುಮಂತಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ